**ಬಾಲ ಕಾರ್ಮಿಕರ ಬಗ್ಗೆ**

773 - ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ): ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ನಗರದ ಕೆಲವು ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;*

*ಆ) ಇದರ ಬಗ್ಗೆ ಸೂಕ್ತ ಕ್ರಮಗಳೇನಾದರೂ ಕೈಕೊಳ್ಳಲಾಗಿದೆಯೆ?*

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ನಗರದಲ್ಲಿ ಕೆಲವು ಸಣ್ಣ ಹೋಟೆಲ್‌ಗಳು, ಸಣ್ಣ ಪುಟ್ಟ ಗ್ಯಾರೇಜ್‌ಗಳು, ಅಗರಬತ್ತಿ ಸಂಸ್ಥೆಗಳೂ ಹಾಗೂ ಇಂತಹ ಸಂಸ್ಥೆಗಳಲ್ಲಿ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಂಡಿರುವುದು ಕಂಡು ಬಂದಿದೆ.

ಆ) ಭಾರತ ಸರ್ಕಾರವು ಬಾಲ ಕಾರ್ಮಿಕರ (ನಿಷೇಧ ಹಾಗೂ ನಿರ್ಬಂಧ) 1986 ಕಾಯ್ದೆಯನ್ನು ರಚಿಸಿದ್ದು ಅದರನ್ವಯ ಕರ್ನಾಟಕ ಸರ್ಕಾರವು ಇಷ್ಟರಲ್ಲಿ ನಿಯಮಗಳನ್ನು ರಚಿಸಿ, ಕಾಯ್ದೆ ಹಾಗೂ ನಿಯಮಗಳನ್ನು ಜಾರಿಗೊಳಿಸಲಿದೆ.

ಮತ್ತೆ ಹಾಲಿ ಕೆಲವು ಕಾರ್ಮಿಕರ ಕಾಯ್ದೆಗಳಡಿಯಲ್ಲಿ ಅಂದರೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, ಕಾರ್ಖಾನೆಗಳ ಕಾಯ್ದೆ ಬೀಡಿ ಮತ್ತು ಸಿಗಾರ್ ಕೆಲಸಗಾರರ ಕಾಯ್ದೆ, ತೋಟ ಕಾರ್ಮಿಕರ ಕಾಯ್ದೆ, ಸಾರಿಗೆ ನೌಕರರ ಕಾಯ್ದೆ ಮುಂತಾದವುಗಳಲ್ಲಿ ಬಾಲ ಕಾರ್ಮಿಕರ ನಿಷೇದ ಹಾಗೂ ಅಭ್ಯುದಯಾಕ್ಕಾಗಿ ಕೆಲವು ಕಲಂಗಳಿದ್ದು ಅವುಗಳನ್ನು ಕಾರ್ಮಿಕ ಇಲಾಖೆ ಹಾಗೂ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ ಜಾರಿ ಮಾಡುತ್ತಿದೆ.

**ರಾಜ್ಯದಲ್ಲಿ ಬರಪರಿಹಾರ ಕಾರ್ಯಗಳ ಬಗ್ಗೆ**

769 - ಶ್ರೀ ಎಲ್.ಆರ್. ಶಿವರಾಮೇಗೌಡ, (ನಾಗಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿ ಈ ವರ್ಷ ಬರಗಾಲಕ್ಕೆ ಒಳಗಾದ ತಾಲ್ಲೂಕುಗಳೆಷ್ಟು?*

*ಆ) ಈ ಬರಗಾಲಕ್ಕೆ ತುತ್ತಾದ ಗ್ರಾಮಗಳಿಗೆ ಪರಿಹಾರ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು?*

*ಇ) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದಿಂದ ಕೇಳಿದ ಹಣವೆಷ್ಟು ಮತ್ತು ಕೇಂದ್ರದವರು ನೀಡಿದ ಹಣವೆಷ್ಟು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) 132

ಆ) ಬರಗಾಲ ಪರಿಹಾರಕ್ಕಾಗಿ ಸರ್ಕಾರದಿಂದ ಒಟ್ಟು 36.00 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ದಿನಾಂಕ-15.2.1991ರವರೆಗೆ ಬಂದಿರುವ ವರದಿಗಳ ಪ್ರಕಾರ 10.70 ಕೋಟಿ ರೂ.ಗಳು ಖರ್ಚಾಗಿರುತ್ತವೆ.

ಇ) ಪ್ರಸಕ್ತ ಹಣಕಾಸು ಸಾಲಿನಿಂದ ಕೇಂದ್ರ ಸರ್ಕಾರವು "ಪ್ರಕೃತಿ ವಿಕೋಪ ಪರಿಹಾರ ನಿಧಿ"ಯನ್ನು ಸೃಜಿಸಿದೆ. ಈ ನಿಧಿಯ ಮೊತ್ತ ಒಟ್ಟು 27.00 ಕೋಟಿ ರೂ. ಗಳು. ಈ ಪೈಕಿ ಶೇಕಡಾ 75 ಭಾಗವನ್ನು, ಅಂದರೆ, 20.25 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. ಉಳಿದ ಶೇಕಡಾ 25 ಭಾಗವನ್ನು, ಅಂದರೆ, 6.75 ಕೋಟಿ ರೂ. ಗಳನ್ನು ರಾಜ್ಯ ಸರ್ಕಾರವು ಭರಿಸುತ್ತದೆ. ಇದರ ಜೊತೆಗೆ, ಹೆಚ್ಚಿನ ಹಣವಾಗಿ 90.00 ಕೋಟಿ ರೂ.ಗಳನ್ನು ಬರ ಪರಿಹಾರಕ್ಕಾಗಿ ನೀಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿತೆ.